ಸ್ನೇಹ, ಕೆಲವೊಂದು ಸಿಹಿ, ಇನ್ನು ಕೆಲವು ಕಹಿ ನೆನಪುಗಳನ್ನು ಗಂಟು ಕಟ್ಟಿ ಊರಿಗೆ ಮರಳಲು ತಯಾರಾದೆ. ಕಲಿಯಲು ಎಷ್ಟೆಲ್ಲ ತಯಾರಿ ಮಾಡಿಕೊಂಡು, ಕಷ್ಟಪಟ್ಟು ಬಂದಿದ್ದೆ. ಆದರೆ ಕಲಿತದ್ದಕ್ಕಿಂತ ಇತರ ವಿಷಯಗಳು, ಗೆಳೆತನಗಳು, ಹಗೆತನಗಳು ಇವೇ ಹೆಚ್ಚು ನೆನಪಿನಲ್ಲುಳಿಯುತ್ತವೆ. ಹೊರಡುವ ಹಿಂದಿನ ದಿನ ಅವ ಬಂದ. ಹಾಸ್ಟೆಲಿನ ಕಾಂಪೌಂಡಿಗೊರಗಿ ನಿಂತಿದ್ದ. ಅಲ್ಲಿಯೇ ನಿಂತು ಮಾತನಾಡುವುದು ಬೇಡವೆನಿಸಿ, ''ಕ್ಯಾಂಟೀನಿಗೆ ಹೋಗೋಣ'' ಎಂದು ನಾನೇ ಹೊರಡಿಸಿದೆ. ಚಹಾ ಕುಡಿದು ಮತ್ತೆ ಹಾಸ್ಟೆಲಿಗೆ ಅವನೊಡನೆ ಹೆಜ್ಜೆ ಹಾಕುವಾಗ ಹಿಂದೆಂದೋ ಕಲಿತ 'The last ride together' ಪದ್ಯ ನೆನಪಾಯಿತು. ಈ ರೀತಿ ಇವನೊಡನೆ ಹೆಜ್ಜೆ ಹಾಕುವ ಅವಕಾಶ ಈ ಜನ್ಮದಲ್ಲಿ ಮುಂದೆಂದೂ ಸಿಗಲಿಕ್ಕಿಲ್ಲ. ಇದೇ ಕೊನೆ. ಈ ಕ್ಷಣವೇ ಅನಂತವಾಗಲಿ ಎಂದು ಅನಿಸಿತು. ಮಾತಿಲ್ಲ, ಕತೆಯಿಲ್ಲ. ಆದರೂ ಅವನೊಳಗಿನ ಯಾವುದೋ ದನಿ ನನ್ನೊಳಗೆ ಸದ್ದು ಮಾಡುವಂತೆ ಮಧ್ಯೆ ಸೇತುವೆ ಕಟ್ಟಿದ್ದಾದರೂ ಯಾರು? ನನ್ನೊಳಗಿನ ದನಿ ಅವನಿಗೆ ಕೇಳಿಸಲಿಲ್ಲವೇ? ಹಾಸ್ಟೆಲ್ ಹತ್ತಿರ ಬರುತ್ತಿದ್ದಂತೆ ನಿಂತು ಅವನೆಡೆಗೆ ತಿರುಗಿ ಕೈ ಬೀಸಿದೆ. ಅವನೂ ಕೈ ಮಾಡಿದ.

ಮರುದಿನ ಅಪ್ಪ ಬಂದರು. ಎಲ್ಲ ಸಾಮಾನು ಸರಂಜಾಮು ಕಟ್ಟಿಕೊಂಡು ಬಸ್‌ಸ್ಟ್ಯಾಂಡಿಗೆ ಬಂದು ಬೆಳಗಾವಿಯ ಬಸ್ಸು ಹತ್ತಿ ಕುಳಿತೆವು. ಬಸ್ಸಿನ ಗಾಲಿಗಳು ಎಬ್ಬಿಸಿದ ದೂಳಿಗೆ ಮಂಜಾದ ಕಣ್ಣಿಂದ ನೀರು ಫಳಕ್ಕನೇ ಕೆನ್ನೆಗಿಳಿದವು.

ಮುಂದೆಮಾಡಿದ ಬಾಗಿಲನ್ನು ದೂಡಿ ಬಂದ ಮಧುರಾ ಲೈಟು ಹಾಕುವುದಕ್ಕೂ, ನಾನು ಬಿಕ್ಕಿ ದೀರ್ಘ ಶ್ವಾಸ ತೆಗೆದುಕೊಳ್ಳುವುದಕ್ಕೂ ಸರಿಯಾಯ್ತು. ''ಇನ್ನೂ ನಿದ್ರೆ ಬರಲಿಲ್ಲೇನು?'' ಎನ್ನುತ್ತ ಪಕ್ಕದ ಇನ್ನೊಂದು ಕಾಟಿನ ಮೇಲೆ ಅಡ್ಡಾಗಿ, ''ಎಲ್ಲಿದ್ದಾನೋ ಈಗ?'' ಸ್ವಗತದಲ್ಲೆಂಬಂತೆ ಕೇಳಿದಳು. ''ದಿಲ್ಲಿ, ಸೆಂಟ್ರಲ್ ಗೌರ್ನಮೆಂಟ್ ಜಾಬಿನಲ್ಲಿ. ಎರಡು ಮಕ್ಕಳಿವೆಯಂತೆ'' ಅಂದವಳೇ ಈ ಕಡೆ ಹೊರಳಿ ಅವಳಿಗೆ ಕಾಣದಂತೆ ಕಣ್ಣೊರೆಸಿಕೊಂಡೆ.


## ನೀತಾ ರಾವ್

ಕಥೆಗಾರ್ತಿ ನೀತಾ ಬೆಳಗಾವಿಯರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಎಂ.ಕಾಂ. ಪದವಿ ಪಡೆದಿದ್ದಾರೆ. ಹದಿನಾಲ್ಕು ವರ್ಷಗಳ ಬ್ಯಾಂಕ್ ಸೇವೆಯ ಬಳಿಕ ಕಳೆದ ಹತ್ತು ವರ್ಷಗಳಿಂದ ಕಾಲೇಜು ಪ್ರಾಧ್ಯಾಪಕರಾಗಿದ್ದಾರೆ. ಪತ್ರಿಕೆಗಳಲ್ಲಿ ಹಾಸ್ಯ ಲೇಖನಗಳು, ಪ್ರಬಂಧಗಳು ಪ್ರಕಟವಾಗಿವೆ. ಅವರ ಪ್ರಕಟಿತ ಪುಸ್ತಕ 'ಅಂತಃಪುರ'.